**ಸಾಕ್ಷಿಯನ್ನು ದಿಃ 02.07.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮಧ್ಯಂತರ ಅರ್ಜಿ ಅದೇಶದ ಮೇರೆಗೆ ಪಾಟೀ ಸವಾಲುಃ 5 ರಿಂದ 7 ನೇ ಪ್ರತಿವಾದಿ ಪರ ಶ್ರೀ ಆರ್.ಕೆ ಪರ ಶ್ರೀ ಡಿ.ಜಿ ವಕೀಲರಿಂದಃ-**

ನನಗೆ ವಿದ್ಯಾಭ್ಯಾಸ ಇಲ್ಲ. ನನಗೆ ಯಾವುದೆ ದುಷ್ಚಟಗಳು ಇಲ್ಲ. 5 ನೇ ಪ್ರತಿವಾದಿ ಚಂದ್ರೇಶೇಖರ ಗಂಡ ನನಗೆ ಗೊತ್ತು. ಅವರು ಸೌದಿ ಅರೆಬಿಯಾ ದಲ್ಲಿ ಡಾಕ್ಟರ್ ಆಗಿದ್ದರು ಎಂದರೆ ಸರಿ. ಅವರ ಮೂಲ ಮಂಡ್ಯ ಜಿಲ್ಲೆ, ಕೆ.ಎಂ ದೊಡ್ಡಿ ಯವರು ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ಅವರು ಆತ್ಮೀಯರಾಗಿದ್ದರು ಎಂದರೆ ಸರಿ. ಅವರು ಸೌದಿ ಅರೆಬಿಯಾದಲ್ಲಿ ವೈದ್ಯರಾಗಿದ್ದಾರೆ ಜಮೀನು ಖರೀದಿ ವಿಚಾರವಾಗಿ ನನಗೆ ಹೇಳಿದ್ದರು ಎಂದರೆ ಸರಿಯಲ್ಲ. 5 ನೇ ಪ್ರತಿವಾದಿ ರವರ ಗಂಡ ಕೊರೊನ ಸಮಯದಲ್ಲಿ ತೀರಿಕೊಂಡರು ಎಂದು ಅವರ ಪತ್ನಿ 6 ತಿಂಗಳ ನಂತರ ತಿಳಿಸಿದರು.

ವಾದಿಯ ಮದುವೆಯ ಖರ್ಚು ವೆಚ್ಚವನ್ನು ನಾನೇ ಮಾಡಿರುತ್ತೇನೆ ಎಂದರೆ ಸರಿ. ದಿಃ 29.04.2010 ರಂದು ಐಟಂ ನಂ.1 ರ ಸರ್ವೆ ನಂ. 140/2 5 ಎಕರೆ 7 ಗುಂಟೆ ಕ್ಕೆ ಸಂಬಂಧಿಸಿದಂತೆ ವೈದ್ಯ ಚಂದ್ರಶೇಖರ ರವರಿಗೆ ನಾನು ಕ್ರಯ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಿಪಿ. 9 ರ ಕ್ರಯ ಪತ್ರದಲ್ಲಿ ಮಹದೇವಪ್ಪ ಎಂದು ಇರುವ ಸಹಿ ನನ್ನದಲ್ಲ. ಐಟಂ ನಂ. 2 ರ ಸ್ವತ್ತನ್ನು ದಿಃ 17.04.2009 ರಂದು ನಾನು ಖರೀದಿ ಮಾಡಿದ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಅದು ಪಿತ್ರಾರ್ಜಿತ ಆಸ್ತಿ ಆಗಿರುತ್ತದೆ, ಆ ಬಗ್ಗೆ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುತ್ತೇನೆ. ಐಟಂ ನಂ. 3 ಸರ್ವೆ ನಂ. 130/2 ರಲ್ಲಿ 1 ಎಕರೆ, 8 ಗುಂಟೆ ಜಮೀನನ್ನು ದಿಃ 31.07.2017 ರಂದು 5 ನೇ ಪ್ರತಿವಾದಿ ಗಂಡನಿಗೆ ಕ್ರಯ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಐಟಂ 3 ಸ್ವತ್ತು ನನ್ನ ಸ್ವಯಾರ್ಜಿತ ಸ್ವತ್ತು ಎಂದರೆ ಸರಿ. ದಾವಾ ಐಟಂ 2 ನನ್ನ ಸ್ವಯಾರ್ಜಿತ ಸ್ವತ್ತು ಎಂದರೆ ಸರಿ. ಸರ್ವೆ ನಂ. 144/8 ರಲ್ಲಿ 6 ಎಕರೆ 18 ಗುಂಟೆ ಜಮೀನು ನನ್ನ ಹಿಸ್ಸೆಯಲ್ಲಿ ಇದೆ ಎಂದರೆ ಸರಿ. ಹಾಗೆ ಸರ್ವೆ ನಂ. 103/1 ರಲ್ಲಿ ನನ್ನ ಪತ್ನಿ ಕಾಂತಮ್ಮ ನ ಹೆಸರಿನಲ್ಲಿ 4 ಎಕರೆ 23 ಗುಂಟೆ ಇದೆ ಎಂದರೆ ಸರಿ.

ಚನ್ನಬಸಪ್ಪ ನನ್ನ ತಂದೆ ಅವರ ತಂದೆ ಹೆಸರು ಸಿದ್ದಪ್ಪ. ಸರ್ವೆ ನಂ. 102/5 ರಲ್ಲಿ 7 ಗುಂಟೆ ಚನ್ನಬಸಪ್ಪ ನವರ ಹೆಸರಿನಲ್ಲಿ ಇದೆ ಎಂದರೆ ಸರಿ. ಸರ್ವೆ ನಂ. 140 ರಲ್ಲಿ 3 ಎಕರೆ 25 ಗುಂಟೆ ನಮ್ಮ ತಾತನ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ನನ್ನ ಹೆಸರಿನಲ್ಲಿ ಇದೆ ಎನ್ನುತ್ತಾರೆ. ಕಲ್ಲಳ್ಳಿ ಸರ್ವೆ ನಂ. 109 ರಲ್ಲಿ 11 1/2 ಗುಂಟೆ ನನ್ನ ತಾತನ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ಸರ್ವೆ ನಂ. 103/2 ರಲ್ಲಿ 3 ಎಕರೆ ಆಸ್ತಿ ಇದೆ ಎಂದರೆ ಸರಿಯಲ್ಲ. ಹಾಗೆ 5 ನೇ ಪ್ರತಿವಾದಿ ಸ್ವಾಧೀನಕ್ಕೆ ಮಾಡಿದ್ದೇನೆ ಎಂದು ಕಿರಿಯ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಓ.ಎಸ್ 226/2022 ರಂತೆ ದಾವೆ ಹೂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ದಾವೆಯಲ್ಲಿನಾನು ವಕೀಲವನ್ನು ನೇಮಿಸಿಕೊಂಡಿದ್ದೇನೆ ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ವಿರುದ್ಧ 5 ನೇ ಪ್ರತಿವಾದಿಗೆ ಇಂನಕ್ಷನ್ ಆರ್ಡರ್ (Injunction Order) ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮತ್ತು ನನ್ನ ಮಕ್ಕಳ ವಿರುದ್ಧ 2 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮೈಸೂರು ನ್ಯಾಯಾಲಯದಲ್ಲಿ ಓ.ಎಸ್ 94/2023 ರಂತೆ ದಾವೆ ಹೂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ವಕೀಲರನ್ನು ನಾನು ನೇಮಿಸಿಕೊಂಡಿರುವುದು ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.